## ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ ಮೊಳಕಾಲ್ಮೂರು

ದಾವಾ ಸಂಖ್ಯೆ: ಓಎಸ್. ಸಂಖ್ಯೆ: 79/2019

ಪಿ.ಡಬ್ಲ್ಯೂ. 1

ದಿನಾಂಕ: 26.5.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಪ್ರತಿವಾದಿ ಪರ ವಕೀಲರರಿಂದಃ**

ನಾನು ಜಮೀನಿನ ಸಲುವಾಗಿ ಈ ದಾವಾವನ್ನು ಹೂಡಿರುತೇನೆ. ನನಗೆ ದಾವಾದ ಸರ್ವೆ ನಂಬರ್ ಗಳು ಮತ್ತು ಚಕ್ಕುಬಂದಿಗಳ ಬಗ್ಗೆ ಹೇಳಲು ಆಗುವುದಿಲ್ಲ ಎಂದರೆ ಸರಿ. ನನ್ನ ತಂದೆಯ ಹೆಸರು ಪೂಜಾರಿ ಶಾಂತಪ್ಪ. ತಾಯಿಯ ಹೆಸರು ಪೂಜಾರಿ ಗುರ್ರಮ್ಮ. ನಮ್ಮ ತಂದೆ ತಾಯಿಗೆ 4 ಜನ ಮಕ್ಕಳು ಎಂದರೆ ಸರಿ. ನನ್ನ ತಾಯಿ ಪೂಜಾರಿ ಗುರ್ರಮ್ಮನವರಿಗೆ ದಿನಾಂಕಃ 20.11.1980 ರಲ್ಲಿ ನೊಂದಣಿ ಪತ್ರದ ಮೂಲಕ ಅವರ ತಾಯಿ ಪೂಜಾರಿ ಬಸಮ್ಮ ನಿಂದ ದಾವಾ 2 ನೇ ಅನುಸೂಚಿ ಶ್ರೀದನ ಎಂದು ಅವರ ತಾಯಿಯ ಮನೆಯ ಕಡೆಯಿಂದ ಬಂದಿರುತ್ತದೆ ಎಂದರೆ ಸರಿ. ದಾವಾ 2 ನೇ ಸ್ವತ್ತು ಗುರ್ರಮ್ಮನಿಗೆ ಅವರ ತಾಯಿ ಮನೆಯ ಕಡೆಯಿಂದ ಬಂದ ಆಸ್ತಿ ಆದ ಕಾರಣ ಅವರಿಗೆ ಸಂಪೂರ್ಣ ಹಕ್ಕು ಇರುತ್ತದೆ ಎಂದರೆ ಸರಿ. ನನ್ನ ತಮ್ಮ ಚೆನ್ನಪ್ಪ ಯಾನೆ ಚನ್ನ ಒಡೆಯರ್ ರವರಿಗೆ 3 ಜನ ಮಕ್ಕಳು ಎಂದರೆ ಸರಿ. ಅವರುಗಳು 4 ರಿಂದ 6 ನೇ ಪ್ರತಿವಾದಿಗಳು ಎಂದರೆ ಸರಿ. ನನ್ನ ತಾಯಿ ಪೂಜಾರಿ ಗುರ್ರಮ್ಮರವರು ದಿನಾಂಕಃ 27.8.2017 ರಂದು ಮೃತರಾಗಿರುತ್ತಾರೆ ಎಂದರೆ ಸರಿ. ಅವರ ಜೀವಂತ ಕಾಲದಲ್ಲೆ ದಿನಾಂಕಃ 14.1.2016 ರಂದು ಪ್ರತಿವಾದಿ 4 ರಿಂದ 6 ರವರಿಗೆ ಕಾನೂನುಬದ್ದವಾಗಿ ನೊಂದಣಿ ಮರಣ ಶಾಸನ ಮಾಡಿಸಿರುತ್ತಾರೆ ಎಂದರೆ ಸರಿ. ನನ್ನ ತಾಯಿ ಗುರ್ರಮ ನವರು ಮೃತ ಪಟ್ಟ ನಂತರ ಅವರ ಮರಣ ಶಾಸನದ ಪ್ರಕಾರ 4 ರಿಂದ 6 ನೇ ಪ್ರತಿವಾದಿಗಳಿಗೆ ಆಸ್ತಿಯು ವರ್ಗಾವಣೆಯಾಗಿರುತ್ತದೆ ಎಂದರೆ ಸರಿ. ಈಗಲೂ ಸಹ 4 ರಿಂದ 6 ನೇ ಪ್ರತಿವಾದಿಗಳು ಸದರಿ ಆಸ್ತಿಯನ್ನು ಅವರೇ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿ. ದಾವಾ 1 ಮತ್ತು 3 ನೇ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ. 3 ನೇ ದಾವಾ ಸ್ವತ್ತಿನ ಮನೆಯಲ್ಲಿ 1 ನೇ ಪ್ರತಿವಾದಿ ಮತ್ತು ಅವರ ಮಕ್ಕಳು 4 ರಿಂದ 6 ನೇ ಪ್ರತಿವಾದಿಗಳು ವಾಸವಿರುತ್ತಾರೆ ಎಂದರೆ ಸರಿ. ನಾನು ನ್ಯಾಯಾಲಯಕ್ಕೆ ಬರುವ ಮುಂಚೆ ಜುಬಾನಿ ಕರಾರುನ್ನು ನಾವು ಅಣ್ಣ ತಮ್ಮಂದಿರು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾವುಗಳು ಮೌಖಿಕವಾಗಿ ಮಾತನಾಡಿಕೊಂಡು ಹಂಗಾಮಿ ಸಾಗುವಳಿ ಮಾಡಿಕೊಂಡಿರುತ್ತೇವೆ ಎಂದು

ನುಡಿದಿರುತ್ತಾರೆ. ನಾವುಗಳು ಮೌಖಿಕವಾಗಿ ಮಾತನಾಡಿಕೊಂಡಿರುವ ಪ್ರಕಾರ 3 ನೇ ದಾವಾ ಸ್ವತ್ತಿನ ಮನೆಯಲ್ಲಿ 1 ನೇ ಪ್ರತಿವಾದಿ ಮತ್ತು ಅವರ ಮಕ್ಕಳು 4 ರಿಂದ 6 ನೇ ಪ್ರತಿವಾದಿಗಳಿಗೆ ಮಾತ್ರ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮಗೆ ಸಹ ಅರ್ಧ ಭಾಗವಿರುತ್ತದೆ ಎಂದು ನುಡಿದಿರುತ್ತಾರೆ. 3 ನೇ ದಾವಾ ಸ್ವತ್ತಿನ ಮನೆಯನ್ನು 1 ನೇ ಪ್ರತಿವಾದಿ ಮತ್ತು ಅವರ ಮಕ್ಕಳು 4 ರಿಂದ 6 ನೇ ಪ್ರತಿವಾದಿಗಳಿಗೆ ಬಿಟ್ಟುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. 1 ನೇ ದಾವಾ ಸ್ವತ್ತಿನಲ್ಲಿ ನಮಗೂ ಮತ್ತು ಪ್ರತಿವಾದಿಗಳಿಗೂ ಹಿಸ್ಸಾ ಭಾಗವಿರುತ್ತದೆ ಎಂದರೆ ಸರಿ. 3 ನೇ ದಾವಾ ಸ್ವತ್ತಿನ ಮನೆಯನ್ನು 1 ನೇ ಪ್ರತಿವಾದಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ.

ನನಗೆ ಮುಖ್ಯವಿಚಾರಣೆಯಲ್ಲಿ ಬರೆದ ವಿಚಾರಗಳು ನನಗೆ ಏನು ಬರೆದಿದೆ ಎಂದು ಗೊತ್ತಿರುತ್ತದೆ.

**ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಿದೆ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ ಇದೆ**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಮೊಳಕಾಲ್ಮೂರು